# ಆಡಿಸಿ ನೋಡು... ಉಳಿಸಿ ನೋಡು...



ತೊಗಲುಗೊಂಬೆಯ ಚಿತ್ರ : ರಾವಣನ ಅರಮನೆ

ಹೇಳಬೇಕಾದುದನ್ನು ಹೇಳಲು ನಮ್ಮ ನಾಡವರು ರೂಪಿಸಿಕೊಂಡ ಸಾಧನಗಳನ್ನು ಗಮನಿಸಿದರೆ, ವಿಸ್ಮಯಗಳ ಲೋಕವೇ ತೆರೆದುಕೊಳ್ಳುತ್ತದೆ. ಹೇಳುತ್ತ ಬೆಳೆಯುತ್ತ ಅದೊಂದು ಕಲಾಪ್ರಕಾರವೂ ಜನಮಾಧ್ಯಮವೂ ಆಗಿರುತ್ತದೆ. ಕಸುಬುಗಳೆಲ್ಲ ಕಲೆಗಳಾಗಿ ರೂಪಾಂತರ ಪಡೆಯುತ್ತವೆ. ಕೆಲವೇ ಕೆಲವು ಜನರ ಕೈಯಲ್ಲಿದ್ದ ಅಕ್ಷರದ ಹಂಗಿಲ್ಲದೆ ಬೆಳೆದ ಜನಪದ ಕಲೆಗಳ ವಿಸ್ತಾರ ಎಷ್ಟು ಎಂಬುದನ್ನು ಊಹಿಸಲು ಸಾಧ್ಯವಿಲ್ಲ. ತೊಗಲುಗೊಂಬೆಯ ಆಟ ಅಂಥದೊಂದು ಮಾಂತ್ರಿಕ ಕಲೆ. ಮಹಾಭಾರತ ಮತ್ತು ರಾಮಾಯಣದ ಕಥೆಗಳನ್ನು ದಣಿವಿಲ್ಲದೆ ಹೇಳುವ ಅದರ ಒಂದೇ ಒಂದು ಪ್ರದರ್ಶನದಲ್ಲಿ ನವರಸಗಳ ಪರಿಚಯ ಆಗುತ್ತದೆ. ತೊಗಲುಗೊಂಬೆಯ ಆಟ ಏಕಕಾಲಕ್ಕೆ ಕಲೆ, ಸಾಹಿತ್ಯ, ನಾಟಕ, ಸಂಗೀತ, ನೃತ್ಯಗಳ ಸಂಗಮ. ಅದು ಇಲ್ಲದವರು ಸೃಷ್ಟಿಸುವ ಬಲ್ಲಿದ ಲೋಕ.

ಯುಗಗಳನ್ನೇ ನುಂಗುವ ಕಾಲಕ್ಕೆ ಗೊಂಬೆ ಆಡಿಸುವ ಕಲೆ ಯಾವ ಲೆಕ್ಕ? ತೊಗಲುಗೊಂಬೆ ಆಟವೂ ಕಾಲದ ಹೊಡೆತಕ್ಕೆ ಸಿಕ್ಕಿ ಸುಕ್ಕುಸುಕ್ಕಾಯಿತು. ಹಲವು ಕಾರಣಗಳಿಂದ ಅದರ ಬಣ್ಣ ಮಾಸಿತು. ಆದರೆ ಕಾಲವನ್ನು ಅಲ್ಲದಿದ್ದರೂ ಅದರ ಹೊಡೆತವನ್ನು ತಡೆಯುವವರು ಇರುತ್ತಾರಲ್ಲ ! ಕರ್ನಾಟಕ ಚಿತ್ರಕಲಾ ಪರಿಷತ್ತು, ಅಸಾಮಾನ್ಯ ಕಲಾಪ್ರೇಮಿ ಎಂ.ಎಸ್. ನಂಜುಂಡರಾವ್, ಹಲವು ಕಲಾವಿದರು– ಕಲಾಸಕ್ತರು ಒಟ್ಟಿಗೆ ಸೇರಿಕೊಂಡು ತೊಗಲುಗೊಂಬೆ ಆಟದ ಉಳಿವಿಗೆ ಪಣ ತೊಟ್ಟರು. ನಾಡಿನ ಮೂಲೆಮೂಲೆಗಳಿಂದ ಮಾಡಿದ ಸಾವಿರಾರು ತೊಗಲುಗೊಂಬೆಗಳ ಸಂಗ್ರಹ, ಅವುಗಳ ವರ್ಗೀಕರಣ ಮತ್ತು ಸಂರಕ್ಷಣೆ ದಶಕಗಳ ಕಾಲ ನಡೆಯಿತು. ಕಳೆದ ತಿಂಗಳು ಚಿತ್ರಕಲಾ ಪರಿಷತ್ತಿನಲ್ಲಿ ಆಟಕ್ಕೆ ಹೊಸ ಕಳೆ ಕೊಡುವ ಹಂಬಲ ಹೊತ್ತ ‘ತೊಗಲುಗೊಂಬೆ ಉತ್ಸವ’ ನಡೆದಿದೆ. ಆಟದ ಇಂದಿನ ಸ್ವರೂಪವನ್ನು ಆಧುನಿಕ ಕಾಲದ ಸವಾಲುಗಳು ಮತ್ತು ಅಗತ್ಯಗಳೇ ನಿರ್ಧರಿಸಬೇಕಿದೆ. ಒಟ್ಟಿನಲ್ಲಿ ತೊಗಲುಗೊಂಬೆ ಆಟ ನಿಲ್ಲದೆ ನಡೆಯಬೇಕಲ್ಲವೇ?

–ಆರ್. ಪೂರ್ಣಿಮಾ